ಸಾಲುಗಳು ಇಲ್ಲಿವೆ. ಮಕ್ಕಳೇ ಬರೆದಿದ್ದರೆ ಈ ಬಗೆಯ ಸಾಲುಗಳು ಹುಟ್ಟುತ್ತಿರಲಿಲ್ಲ. ಪ್ರೌಢತೆಯನ್ನ ಬಚ್ಚಿಟ್ಟುಕೊಂಡ ಮುಗ್ಧತೆ ಮಕ್ಕಳ ಕವಿತೆಯ ಅಂಗವಿನ್ಯಾಸವಾಗಬೇಕೆಂದು ನಾನು ಬಯಸುತ್ತೇನೆ. ಇದನ್ನು ಬೇಕಾದರೆ 'ಇನ್ನೋಸೆನ್ಸ್ ಆಫ್ ವಿಸ್ಡಮ್' ಎಂದು ಕರೆಯಲಿಕ್ಕೆ ಅಡ್ಡಿಯಿಲ್ಲ. ಪಂಜೆಯವರ 'ಹಾವಿನ ಹಾಡು' ಎಂಬ ಕವಿತೆಯನ್ನೇ ಎತ್ತಿಕೊಳ್ಳಿ. ಅದು ಕೇವಲ ನಾಗರ ಹಾವನ್ನು ಕುರಿತ ಕವಿತೆಯೇ? ಅಲ್ಲ ಎನ್ನುತ್ತದೆ ಕನ್ನಡ ವಿಮರ್ಶೆ. ಈ ಪದ್ಯದ ಕೊನೆಯ ಚೌಪದಿಯನ್ನು ಗಮನಿಸಿ.

ಬರಿಮೈ ತಣ್ಣಗೆ, ಮನದಲಿ ಬಿಸಿ ಹಗೆ,
ಎರಡೆಳೆ ನಾಲಗೆ ಇದ್ದರು ಸುಮ್ಮಗೆ.
ಎರಗುವೆ ನಿನಗೆ, ಈಗಲೆ ಹೊರಗೆ
ಪೋ ಪೋ ಪೋ ಪೋ ಪೋ ಪೋ ಪೋ ಪೋ

ಈ ಸಾಲುಗಳು ಬ್ರಿಟಿಷ್ ಸಾರ್ವಭೌಮತ್ವಕ್ಕೆ 'ಕ್ವಿಟ್ ಇಂಡಿಯಾ' ಎಂದು ಸೂಚ್ಯವಾಗಿ ಹೇಳುತ್ತಿವೆ ಎನ್ನುತ್ತಾರೆ ವಿಮರ್ಶಕರು. ದೊಡ್ಡವರಿಗೂ ದಕ್ಕುವ ಮಕ್ಕಳ ಕವಿತೆಗಳು ಎನ್ನುವಂಥ ವಿಮರ್ಶೆ ಇಂಥ ಕವಿತೆಗಳನ್ನು ಕುರಿತೇ ಹುಟ್ಟಿಕೊಳ್ಳುತ್ತದೆ. ನನ್ನ 'ಗುಬ್ಬಿಮರಿ' ಕವಿತಾ ಗುಚ್ಛದಲ್ಲಿ, ಮಕ್ಕಳಿಗೆ ಭಾರವಾಗದಂತೆಯೇ ಅನೇಕ ಗಂಭೀರ ಸಾಮಾಜಿಕ ಹೇಳಿಕೆಗಳನ್ನು ಮಾಡಲಾಗಿದೆ ಎಂದು ಕನ್ನಡ ವಿಮರ್ಶೆ ಗುರುತಿಸಿದೆ. ಒಂದು ಗುಬ್ಬಿಮರಿ ಕಾಗೆಮರಿಯೊಂದಿಗೆ ಆಡಿಕೊಳ್ಳುತ್ತಿದೆ. ಅದು ತಾಯಿ ಗುಬ್ಬಿಗೆ ಸಹ್ಯವಾಗುವುದಿಲ್ಲ. ಅದು ಮರಿಗೆ ನೀನು ಕಾಗೆ ಮರಿಯೊಂದಿಗೆ ಆಡುವುದು ಕೂಡದು, ಗುಬ್ಬಿಮರಿ ಏನಿದ್ದರೂ ಗುಬ್ಬಿಮರಿಯೊಂದಿಗೆ ಮಾತ್ರ ಆಡಿಕೊಳ್ಳಬೇಕು ಎಂದು ನಿರ್ಬಂಧಿಸುತ್ತದೆ. ಮುಗ್ಧ ಗುಬ್ಬಿಮರಿ, 'ಕಾಗೆ ಮರಿ ಒಳ್ಳೆ ಮರಿ! ಅದರ ಜೊತೆ ಆಡಿದರೆ ಏನು ತಪ್ಪು?' ಎಂದು ಕೇಳುತ್ತದೆ. ಆಗ ತಾಯಿ ಗುಬ್ಬಿ ಕಾಗೆ ಮರಿಯ ಜೊತೆ ನೀನು ಆಡಿದರೆ ಅದರಂತೆ ನೀನೂ ಕಪ್ಪಗಾಗುತ್ತೀ ಎನ್ನುತ್ತದೆ. ಗುಬ್ಬಿ ಮರಿ ತಕ್ಷಣ ಉತ್ತರಿಸುತ್ತದೆ. ನನ್ನೊಂದಿಗೆ ಆಡಿಕೊಂಡರೆ ಕಾಗೆಮರಿ ನನ್ನ ಹಾಗೇ ಬೆಳ್ಳಗೂ ಆಗಬಹುದಲ್ಲ!? ಇದನ್ನೇ ವಿಸ್ಡಮ್ ಆಫ್ ಇನ್ನೋಸೆನ್ಸ್ ಎಂದು ಗುರುತಿಸಬೇಕಾಗುತ್ತದೆ. ವರ್ಗಭೇದ, ವರ್ಣಭೇದದ ಬಗ್ಗೆ ಯಾವ ಅಬ್ಬರವನ್ನೂ ಮಾಡದೆ ಸಾಮಾಜಿಕನ್ಯಾಯದ ಹೇಳಿಕೆಯನ್ನು ಇಲ್ಲಿ ಮಂಡಿಸಲಾಗಿದೆ. ಹೀಗೆ ಯಾವುದು ಉಚಿತವೋ ಆ ಮೌಲ್ಯಗಳು ಮಕ್ಕಳಿಗೆ ನೀತಿಯ ಭಾರವಿಲ್ಲದೆ ಹೃದ್ಗತವಾಗಬೇಕು ಎಂದು ಯಾರು ತಾನೇ ಬಯಸುವುದಿಲ್ಲ?

ನನ್ನ 'ಕಾರ್ಪೊರೇಷನ್ ಲಾರಿ' ಎಂಬ ಪದ್ಯದಲ್ಲಿ ಹಾಳುಮೂಳನ್ನು ಹೊಟ್ಟೆಗೆ ಹಾಕಿಕೊಳ್ಳುವ ಕಾರ್ಪೊರೇಷನ್ ಲಾರಿಯ ಬಗ್ಗೆ ಮಗುವೊಂದು ವಹಿಸುವ ಅನುಕಂಪೆ ಮತ್ತು ಕಾಳಜಿ ಮುಖ್ಯವಾಗುತ್ತದೆ. 'ಬೇಕಾದ್ದೇನು ಹಾರೋದಕ್ಕೆ' ಎಂಬ ನನ್ನ ಇನ್ನೊಂದು ಪದ್ಯದಲ್ಲಿ ಮೇಡಂ ಮತ್ತು ಮರಿಹಕ್ಕಿಯ ಸಂವಾದವಿದೆ.

ಬೇಕಾದ್ದೇನು ಹಾರೋದಕ್ಕೆ?
"ಟೊಂಕದ ಪಕ್ಕ ರೆಕ್ಕೆ!"
ಅಷ್ಟೇ ಸಾಕೇ ಯೋಚಿಸಿ ನೋಡು; ಬೇಡವೇನು ಮಾಡು?

ಬೇಕಾದ್ದೇನು ಕುಕ್ಕೋದಕ್ಕೆ?
"ಮೂತೀಲೊಂದು ಕೊಕ್ಕು!"